ಯೋಜನೆಯನ್ನು ರೂ. 422.00 ಲಕ್ಷಗಳಿಗೆ ತಯಾರಿಸಿದ್ದು, ತ್ವರಿತ ನಗರ ನೀರು ಸರಬರಾಜು ಯೋಜನೆಯಡಿ ಕೈಗೆತ್ತಿಕೊಳ್ಳಲು ಉದ್ದೇಶಿಸಲಾಗಿದೆ.

ಗ) ಹೊಳಲ್ಕೆರೆ : ಪ್ರಸ್ತುತ ನೀರು ಸರಬರಾಜು ಮಾಡುವ ಯೋಜನೆಯು ವಿವರವಾದ ಅಂದಾಜನ್ನು ತಯಾರಿಸಲಾಗುತ್ತಿದೆ.

4. ರಾಜ್ಯದ ನಗರ ಪ್ರದೇಶಗಳಲ್ಲಿ ಅಗತ್ಯವಾದ ಸಮರ್ಪಕವಾದ ನೀರು ಸರಬರಾಜು ಒದಗಿಸಲು 194 ನಗರ ಮತ್ತು ಪಟ್ಟಣ ಪ್ರದೇಶಗಳಿಗೆ ರೂ. 1,032.89 ಕೋಟಿಗಳ ಕ್ರಿಯಾ ಯೋಜನೆಯನ್ನು ತಯಾರಿಸಲಾಗಿದೆ.

ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡದವರಿಗೆ ರೂಪಿಸಲಾಗಿರುವ ಯೋಜನೆಗಳು (ಶಿವಾಜಿನಗರ).

3386(4129) ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು :— ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡದವರಿಗೆ ರೂಪಿಸಲಾಗಿರುವ ಕೇಂದ್ರ ಪ್ರಾಯೋಜಿತ ಯೋಜನೆಗಳ ಸೂಕ್ತ ಅನುಷ್ಠಾನಕ್ಕೆ ರಾಜ್ಯ ಸರ್ಕಾರ ಕೈಗೊಂಡ ಕ್ರಮಗಳೇನು ಈ ಯೋಜನೆಗಳು ಯಾವುವು

ಆ) ಈ ಯೋಜನೆಗಳ ನಿಗಧಿತ ಗುರಿ ಸಾಧನೆಯಾಗದೇ ಇರುವುದು ನಿಜವೇ

ಇ) ಹಾಗಿದ್ದಲ್ಲಿ, ಅದಕ್ಕೆ ಕಾರಣಗಳೇನು?

ಶ್ರೀ ಕಾಗೋಡು ತಿಮ್ಮಪ್ಪ (ಸಮಾಜ ಕಲ್ಯಾಣ ಸಚಿವರು) :—

ಅ) ಕೇಂದ್ರ ಪುರಸ್ಕೃತ ಮತ್ತು ಕೇಂದ್ರ ವಲಯ ಕಾರ್ಯಕ್ರಮಗಳಿಗೆ ಕೇಂದ್ರ ಸರ್ಕಾರ ಮಂಜೂರು ಮಾಡುವ ಸಹಾಯಧನವನ್ನು ಪರಿಶಿಷ್ಟ ಜಾತಿ ಪರಿಶಿಷ್ಟ ವರ್ಗದ ಅಭಿವೃದ್ಧಿಗೆ ಪೂರಕವಾಗುವಂತಹ ನಿಗಧಿತ ಕಾರ್ಯಕ್ರಮಗಳಿಗೆ ಕೇಂದ್ರ ಸರ್ಕಾರದ ಮಾರ್ಗಸೂಚಿಯನುಗುಣವಾಗಿ ವಿನಿಯೋಗಿಸಲಾಗುತ್ತಿದೆ.

ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡದವರ ಅಭಿವೃದ್ಧಿಗಾಗಿ ಕೇಂದ್ರ ಪುರಸ್ಕೃತ ಕೇಂದ್ರವಲಯ ಯೋಜನೆಗಳನ್ನು ಅನುಬಂಧದಲ್ಲಿ ಒದಗಿಸಲಾಗಿದೆ.

ಆ) ಇಲ್ಲ

ಇ) ಉದ್ಭವಿಸುವುದಿಲ್ಲ.

ಅನುಬಂಧ

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ರೂಪಿಸಲಾಗಿರುವ ಯೋಜನೆಗಳು

ಕ್ರ.ಸಂ.	ಪರಿಶಿಷ್ಟ ಜಾತಿ	ಪರಿಶಿಷ್ಟ ಪಂಗಡ
1)	ತರಬೇತಿ ಮತ್ತು ಸಂಬಂಧಪಟ್ಟ ಯೊಜನೆಗಳು	1) ಕೇಂದ್ರ ಪುರಸ್ಕೃತ ಯೋಜನೆಯಡಿ ಮೆಟ್ರಿಕ್ ನಂತರದ ವಿದ್ಯಾರ್ಥಿವೇತನ (ಶೇ.100 ಕೇಂದ್ರ ಪಾಲು)
2)	ವಿದ್ಯಾರ್ಥಿನಿಲಯಗಳ ಕಟ್ಟಡಗಳ ನಿರ್ಮಾಣ (ಪರಿಶಿಷ್ಟ ಜಾತಿ)	2) ಕೇಂದ್ರ ಪುರಸ್ಕೃತ ಯೋಜನೆಯಡಿ ಪರಿಶಿಷ್ಟ ವರ್ಗ ಬಾಲಕ : ಬಾಲಕಿಯರ ವಿದ್ಯಾರ್ಥಿನಿಲಯಗಳ ಕಟ್ಟಡ ನಿರ್ಮಾಣ (ಶೇ. 50 ಕೇಂದ್ರ ಪಾಲು)
3)	ಮೆಟ್ರಿಕ್ ನಂತರದ ವಿದ್ಯಾರ್ಥಿವೇತನ	3) ಸಂಶೋಧನೆ ಮತ್ತು ತರಬೇತಿ (ಶೇ.50 ಕೇಂದ್ರ ಪಾಲು)
4)	ಅನೈರ್ಮಲ್ಯ ವೃತ್ತಿಯಲ್ಲಿ ತೊಡಗಿರುವವರ ಮಕ್ಕಳಿಗೆ ಮೆಟ್ರಿಕ್ ಪೂರ್ವ ವಿದ್ಯಾರ್ಥಿವೇತನ	4) ಗಿರಿಜನ ಉಪಯೋಜನೆಗೆ ವಿಶೇಷ ಕೇಂದ್ರಿಯ ಸಹಾಯಧನ (ಶೇ.100 ಕೇಂದ್ರ ಸಹಾಯಧನ)
5)	ವೈದ್ಯಕೀಯ ಮತ್ತು ಇಂಜಿನಿಯರಿಂಗ್ ವಿದ್ಯಾರ್ಥಿಗಳಿಗೆ ಬುಕ್ ಬ್ಯಾಂಕ್ ಯೋಜನೆ	5) ಭಾರತ ಸಂವಿಧಾನದ ಅನುಚ್ಛೇದ 275(1) ರಡಿ ಗಿರಿಜನರ ಅಭಿವೃದ್ಧಿಗೆ ಸಹಾಯಧನ (ಶೇ.100 ಕೇಂದ್ರ ನೆರವು)
6)	ಅಸ್ಪೃಷ್ಯತಾ ನಿವಾರಣೆ (ಅಂತರ್‌ಜಾತಿ ವಿವಾಹಕ್ಕೆ ಪ್ರೋತ್ಸಾಹಧನ)	
7)	ಸೆಮಿನಾರ್‌ಗಳು ಮತ್ತು ಕಮ್ಮಟಗಳನ್ನು ನಡೆಸುವುದು.	
8)	ನಾಗರೀಕ ಹಕ್ಕು ಜಾರಿ ನಿರ್ದೇಶನಾಲಯ	
9)	ದೌರ್ಜನ್ಯಕ್ಕೊಳಪಟ್ಟು ಪರಿಶಿಷ್ಟ ಜಾತಿಯವರಿಗೆ ಪರಿಹಾರದನ)	
10)	ವಿಶೇಷ ಘಟಕ ಯೋಜನೆಯಡಿ ವಿಶೇಷ ಕೇಂದ್ರಿಯ ಸಾಹಯದನ)	